# ಆಹಾ ಸುದ್ದಿ!

★ ಸಸಿತೋಟ

ಅಮೆರಿಕದ ಕೊಲರೆಡೋದಲ್ಲಿ ಇತ್ತೀಚೆಗೆ ಕ್ಯಾನಾ ಕ್ಯಾಂಪ್ ನಡೆಯಿತು. ಶಿಬಿರದಲ್ಲಿ ಮಾದಕ ದ್ರವ್ಯ ಕ್ಯಾನಾಬಿಸ್‌ನಿಂದ ಮಸಾಜ್, ಮಾರಿಜುವಾನಾದಿಂದ ಯಾವ ಬಗೆಯ ಅಡುಗೆ ತಯಾರಿಸಬಹುದು... ಎಂದೆಲ್ಲಾ ತರಬೇತಿ ನೀಡಲಾಯ್ತಂತೆ. ಭಾಗವಹಿಸಿ ಸರ್ಟಿಫಿಕೇಟ್ ಪಡೆದವರಿಗೆ ಉದ್ಯೋಗಾವಕಾಶಗಳೂ ಭರಪೂರು ಇರಬಹುದು!



ಸ್ಪೇನಿನ ಬೆಟ್ಟವೊಂದರಲ್ಲಿ ಪ್ರತಿ ವರ್ಷ ನಡೆವ ವೈನ್ ಹಬ್ಬದಲ್ಲಿ ನೆರೆದವರ ಮೇಲೆ ವೈನ್ ಸುರಿಯಲಾಗುತ್ತದಂತೆ. ಈ ಬಾರಿ 1.30 ಲಕ್ಷ ಲೀಟರ್ ವೈನನ್ನು ನೆರೆದಿದ್ದ 9 ಸಾವಿರ ಮಂದಿಯ ಮೇಲೆ ಸುರಿಯಲಾಯ್ತು. ಜನ ಬಕೆಟ್‌ಗಳು, ಬಾಟಲ್‌ಗಳು, ಟ್ಯಾಂಕರ್‌ಗಳಲ್ಲಿ ವೈನ್ ತುಂಬಿಕೊಂಡು ಎರಚಾಡಿದರು. ವರ್ಷವಿಡೀ ನಾಲಿಗೆ ವೈನ್ ರುಚಿ ಸವಿದರೆ, ಅಂದು ದೇಹಕ್ಕೆ ರುಚಿ ನೋಡುವ ಅವಕಾಶ.

ಫಿಲಿಪ್ಪೀನ್ಸ್‌ನಲ್ಲಿ ಜೂಜಿನ ಹುಚ್ಚು ಬಹಳವಂತೆ. ಸಂಬಂಧಿಕರು ಸತ್ತು ಸ್ಮಶಾನ ಸೇರಿದಾಗಲೂ ಜೂಜಾಡುವುದು ಸಂಪ್ರದಾಯವಂತೆ. ಕೋಳಿ ಅಂಕ, ಜೇಡನ ಓಟ... ಹೀಗೆ ಯಾವುದಾದರೂ ಸರಿ ಬೆಟ್ ಕಟ್ಟುವ ಜನರು ಹಣ, ಮನೆ, ಆಸ್ತಿ ಕಳೆದುಕೊಂಡ ನಂತರ ಹೆಂಡತಿಯನ್ನೂ ಪಣಕ್ಕಿಡುತ್ತಾರಂತೆ. ಒಲ್ಲದ ಹೆಂಡತಿಯನ್ನು ತ್ಯಜಿಸಲು ಒಳ್ಳೆಯ ಸಂದರ್ಭ.






ವಾಷಿಂಗ್ಟನ್‌ನಲ್ಲಿ ಹದ್ದು ಕಾಗೆಯ ಮೇಲೆ ಎರಗಲು ಯತ್ನಿಸಿತು. ಆದರೆ ಜಾಣ ಕಾಗೆ ತಪ್ಪಿಸಿಕೊಂಡು ಹದ್ದಿನ ಮೇಲೇ ಸವಾರಿ ಹೊರಟಿತು. ಇದನ್ನು ಜಾಣನಾದ ಛಾಯಾಚಿತ್ರಗ್ರಾಹಕನೊಬ್ಬ ಸೆರೆ ಹಿಡಿದ. ಬಸ್, ರೈಲಿನ ಟಾಪ್ ಮೇಲೆ ಜನ ಸವಾರಿ ಮಾಡುವುದನ್ನು ನೋಡಿ ಕಲಿಯಿತೇ ಈ ಕಾಗೆ?

ನ್ಯೂಯಾರ್ಕ್‌ನಲ್ಲಿ ಮನೆ ಖರೀದಿಸಲು ಹುಡುಕಾಡುವವರಿಗೆ ಒಂದೇ ಒಂದು ಷರತ್ತು, ಅವರ ಸಾಕು ನಾಯಿ ಯಾವ ತಳಿಗೆ ಸೇರಿದ್ದು ಎಂದು ಸರ್ಟಿಫಿಕೇಟ್ ಕೊಡಬೇಕಂತೆ. ಕೆಲವು ರೋಷಾವೇಶದ ನಾಯಿ ತಳಿಗಳನ್ನು ಪಟ್ಟಿ ಮಾಡಲಾಗಿದ್ದು, ಅವುಗಳು ನಿಮ್ಮ ಬಳಿ ಇದ್ದರೆ ನಿಮಗೆ ಗೇಟ್‌ಪಾಸ್. ಸರ್ಟಿಫಿಕೇಟ್ ನೀಡದಿದ್ದರೆ ನಾಯಿಗಳಿಗೆ ಡಿಎನ್‌ಎ ಪರೀಕ್ಷೆ. ನಾಯಿಪಾಡೆಂದರೆ ಇದೇ ಇರಬಹುದು.



ಇದು ಅಮೆರಿಕದ ಅಧ್ಯಕ್ಷೀಯ ಚುನಾವಣೆಯ ಅಭ್ಯರ್ಥಿ ಡೋನಾಲ್ಡ್ ಟ್ರಂಪ್‌ನ ಪೇಪರ್ ಕಲಾಕೃತಿ. ಮೆಕ್ಸಿಕೋದ ಕಲಾವಿದ ಡಾಲ್ಟನ್ ರಚಿಸಿದ್ದಂತೆ. ಪ್ರೀತಿಯಿಂದಲ್ಲ, ಸಿಟ್ಟಿನಿಂದ. ಮೆಕ್ಸಿಕೋ ಅಮೆರಿಕಕ್ಕೆ ಅಪರಾಧಿಗಳನ್ನು ರಫ್ತು ಮಾಡುತ್ತಿದೆ ಎಂಬ ಟ್ರಂಪ್ ಹೇಳಿಕೆ ಪ್ರತಿಭಟಿಸಲು ಈ ಗೊಂಬೆ ಮಾಡಿ ಊರ ತುಂಬ ನಿಲ್ಲಿಸಿದ್ದಾನಂತೆ. ಜನ ಕೈಗೆ ಬಡಿಗೆ ತೆಗೆದುಕೊಂಡು ಇದಕ್ಕೆ ಬಾರಿಸುತ್ತಾರಂತೆ. ಇದರ ಬದಲು ಒಂದಿಷ್ಟು ಕಲ್ಲುಗಳನ್ನೇ ಅಮೆರಿಕಕ್ಕೆ ರಫ್ತು ಮಾಡಬಹುದಿತ್ತು, ಪ್ರಚಾರದ ವೇಳೆ ಉಪಯೋಗಕ್ಕೆ ಬರುತ್ತಿತ್ತು.